ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) :–

(ಅ) ಕಳೆದ ಲೋಕಸಭಾ ಚುನಾವಣೆಯಲ್ಲಿ ಬೀದರ್ ಜಿಲ್ಲೆಯಲ್ಲಿ ಪೊಲೀಸ್ ಅಧಿಕಾರಿಗಳ ಕರ್ತವ್ಯ ಲೋಪವಾದ ಬಗ್ಗೆ ವರದಿಯಾಗಿರುವುದಿಲ್ಲ.

ಆ) ಇಲ್ಲ.

ಖಾಲಿ ಹುದ್ದೆಗಳನ್ನು 371(ಜೆ) ಪ್ರಕಾರ ಭರ್ತಿಮಾಡುವುದು

79(224) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :–ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೆ:–

(ಅ) ಬೀದರ್‌ನಲ್ಲಿರುವ ಪಶು ವಿಶ್ವವಿದ್ಯಾಲಯಕ್ಕೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಎಷ್ಟು ಖಾಲಿ ಇವೆ ; (ವಿವರ ನೀಡುವುದು)

(ಆ) ಖಾಲಿ ಇರುವ ಹುದ್ದೆಗಳನ್ನು 371 (ಜೆ) ಆಧಾರದ ಮೇಲೆ ಭರ್ತಿ ಮಾಡಲು ಪ್ರಕ್ರಿಯೆ ಪ್ರಾರಂಭಿಸಿ ನೇಮಕಾತಿ ಮಾಡಲು ಕ್ರಮ ವಹಿಸಲಾಗುವುದೇ ;

(ಇ) 371(ಜೆ) ನಿಯಮದ ಆಧಾರದಂತೆ ನೇಮಕಾತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು 371 (ಜೆ) ಪ್ರಕಾರ ನೇಮಕಾತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನ ಸಚಿವರು)

(ಅ) ಬೀದರ್‌ನಲ್ಲಿರುವ ಪಶುವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಮಂಜೂರಾದ ಹುದ್ದೆಗಳ ವಿವರ ಈ ಕೆಳಗಿನಂತಿದೆ ;

ಬೋದಕ ಹುದ್ದೆಗಳು :

ಕ್ರ ಸಂ.	ಹುದ್ದೆ ವಿವರ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಇರು ಹುದ್ದೆ
1)	ಪ್ರಾಧ್ಯಾಪಕ	93	34	48
2)	ಸಹ ಪ್ರಾಧ್ಯಾಪಕ	126	33	93
3)	ಸಹಾಯಕ ಪ್ರಾಧ್ಯಾಪಕರು	357	176	126

ಬೋದಕೇತರ ಹುದ್ದೆಗಳು :

ಕ್ರ ಸಂ.	ಹುದ್ದೆ ವಿವರ	ಮಂಜೂರಾ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಇರುವ ಹುದ್ದೆ
1)	ಬೋದಕೇತರ ಹುದ್ದೆಗಳು	1025	338	687

(ಆ) ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಗೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೀದರ್‌ನಲ್ಲಿ ಖಾಲಿ ಇರುವ ಹುದ್ದೆಗಳು 371(ಜೆ) ಆಧಾರದ ಮೇಲೆ ಭರ್ತಿ ಮಾಡಲು ಈಗಾಗಲೇ ದಿ: 2–3–2014 ರಂದು ನೇಮಕಾತಿ ಅಧಿಸೂಚನೆ ಹೊರಡಿಸಿದ್ದು, ಪ್ರಕ್ರಿಯೆ ಜಾರಿಯಲ್ಲಿದೆ.

(ಇ) ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ತುಂಬಲು ದಿ: 2–3–2014 ರಂದು ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ತದನಂತರ ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಬರುವ ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ್ ಹಾಗೂ ಹೈನು ವಿಜ್ಞಾನ ಮಹಾವಿದ್ಯಾಲಯ, ಗುಲ್ಬರ್ಗಾಕ್ಕೆ 371(ಜೆ) ನಿಯಮಾವಳಿಯಂತೆ ಮೀಸಲಾತಿ ನೀಡುವ ಕುರಿತು ಪಶುಯವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಸರ್ಕಾರವು ಸ್ಪಷ್ಟೀಕರಣ ನೀಡಿದ್ದು, ಅದರಂತೆ 371(ಜೆ) ಪ್ರಕಾರ ಮೀಸಲಾತಿಯನ್ನು ಅಳವಡಿಸಿ ಪುನಃ ತಿದ್ದುಪಡಿ

ಅಧಿಸೂಚನೆಯನ್ನು ವಿಶ್ವವಿದ್ಯಾಲಯವು ದಿ: 3–4–2014 ರಂದು ಹೊರಡಿಸಿದೆ. ಅದರಂತೆ ನೇಮಕಾತಿ ಪ್ರಕಿಯೆಯು ಪ್ರಗತಿಯಲ್ಲಿದೆ.

(ಈ) ಹೌದು.

ಶಬರಿಮಲೆಯಲ್ಲಿ ಕರ್ನಾಟಕ ಭವನ ನಿರ್ಮಾಣ

80(84) **ಶ್ರೀ ಗೋಪಾಲಯ್ಯ ಕೆ (ಮಹಾಲಕ್ಷ್ಮೀ ಲೇಔಟ್)** :–ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಶಬರಿ ಮಲೈಯಲ್ಲಿನ ನಿಲಕ್ಕಲ್‌ನಲ್ಲಿ ಸರ್ಕಾರ ಕರ್ನಾಟಕ ಭವನವನ್ನು ನಿರ್ಮಿಸಲು ಉದ್ದೇಶಿಸಿದೆಯೇ ;

(ಆ) ಹಾಗಿದ್ದಲ್ಲಿ, ಈ ಭವನ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;

(ಇ) ಎಷ್ಟು ಕೊಠಡಿಗಳ ಕಟ್ಟಡ ನಿರ್ಮಿಸಲಾಗುವುದು ;

(ಈ) ಇದರಿಂದ ಕರ್ನಾಟಕದಿಂದ ಹೊಗತಕ್ಕ ಎಷ್ಟು ಯಾತ್ರಾರ್ಥಿಗಳಿಗೆ ವಸತಿ ಸೌಲಭ್ಯ ಲಭ್ಯವಾಗುವುದು ;

(ಉ) ಈ ಕಟ್ಟಡ ನಿರ್ಮಾಣಕ್ಕೆ ಕೇರಳ ಹೈಕೋರ್ಟ್ ತಡೆಯಾಜ್ಞೆ ನೀಡಿದೆಯೇ ;

(ಊ) ಹಾಗಿದ್ದಲ್ಲಿ, ಇದನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಸಿದ್ದರಾಮಯ್ಯ :– ಮಾನ್ಯ ಮುಖ್ಯಮಂತ್ರಿಗಳು :

(ಅ) ಹೌದು.

(ಆ) ಕರ್ನಾಟಕ ಭವನ ನಿರ್ಮಾಣಕ್ಕೆ ರೂ.2.00 ಕೋಟಿ ವೆಚ್ಚ ಆಗುವುದಾಗಿ ಅಂದಾಜಿಸಲಾಗಿದೆ.

(ಇ) ಕರ್ನಾಟಕ ಭವನದಲ್ಲಿ ಈ ಕೆಳಕಂಡಂತೆ ಸೌಕರ್ಯಗಳನ್ನು ಒದಗಿಸುವ ಉದ್ದೇಶವನ್ನು ಇರಿಸಿಕೊಂಡು ನಕ್ಷೆಯನ್ನು ತಯಾರಿಸಲಾಗಿದೆ.

1) <u>ನೆಲ ಮಹಡಿಯಲ್ಲಿ:</u> ಪೊಲೀಸರ ಡಾರ್ಮಿಟರಿ, ಆರೋಗ್ಯ ಕೇಂದ್ರ ಕ್ಯಾಂಟೀನ್ ಹಾಗೂ ಶೌಚಾಲಯಗಳು.